## ಪ್ರಶ್ನೆಪತ್ರಿಕೆ -೩ ಪ್ರಥಮ ಭಾಷೆ ಕನ್ನಡ ೧೦ ನೇ ತರಗತಿ ಅಂಕಗಳು : ೧೦೦

ಸೂಚನೆಗಳು : ಪ್ರಶ್ನೆಪತ್ರಿಕೆಯು ಎ,ಬಿ ಮತ್ತು ಸಿ ಎಂಬ ಮೂರು ಭಾಗಗಳನ್ನು ಒಳಗೊಂಡಿದೆ. ಸೂಚನೆಯನ್ನು ಅನುಸರಿಸಿ ಉತ್ತರಗಳನ್ನು ಬರೆಯಿರಿ.

### ಭಾಗ -'ಎ'

ಈ ಕೆಳ ಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೯*೧ =೯

೧ ಅಮೆರಿಕ ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ?

೨.ಗೊರೂರರನ್ನು ನೋಡಿದ ವಿದ್ಯಾರ್ಥಿಗಳ ಭಯಕ್ಕೆ ಕಾರಣವಾದ ಅಂಶ ಯಾವುದು?

೩.ಬುಕ್ಕರಾಯನ ಹಿರಿಮೆ ಏನು?

೪.ಮಲೆಗಳಲ್ಲಿ ಮದುಮಗಳು ಕಾದಂಬರಿ ಬರೆದವರು ಯಾರು?

೫.ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?

೬.ಹಲಗಲಿ ಗುರುತು ಉಳಿಯದಂತಾದುದು ಏಕೆ?

೭.ನಕುಲಸಹದೇವರು ಯಾವ ದೇವತೆಗಳ ಅನುಗ್ರಹ ದಿಂದ ಜನಿಸಿದರು?

೮.ಮಾನವನ ಕಾದಾಟಕ್ಕೆ ಕಾರಣವೇನು?

೯.ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?

ಈ ಕೆಳಗಿನವುಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧೦*೨=೨

೧೦.ಗಾಂಧಿ ಮತ್ತು ಖಾದಿಯ ಕುರಿತು ಗೊರೂರರು ಅಮೆರಿಕದ ವಿದ್ಯಾರ್ಥಿಗಳಿಗೆ ಏನು ಹೇಳಿದರು?

೧೧.ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನು ಆಹ್ವಾನಿಸಿದನು?

೧೨.ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?

೧೩.ಭರತ ಖಂಡದ ಹುಲಿಗಳ ಧರ್ಮವನ್ನು ತಿಳಿಸಿ.

೧೪.ಲಾವಣಿಗಳನ್ನು ಏಕೆ ವೀರಗೀತೆಗಳೆಂದು ಕರೆಯಲಾಗಿದೆ?

೧೫.ಇಂದುಮತಿ ಲಮಾಣಿಯವರು ನನ್ನಾಸೆ ಪದ್ಯದಲ್ಲಿ ಏನಾಗಲು ಬಯಸುವೆ ಎಂದು ಹೇಳಿದ್ದಾರೆ?

೧೬.ಆರ್ ನಿರ್ಮಲರವರು ತಮ್ಮ ಹೆಸರಿನ ನಾಮಫಲಕ ಇರಲೆಂದು ಆಸೆಪಡದಿರಲು ಕಾರಣವೇನು?

೧೭.ವಿಜ್ಞಾನಿಗಳ ವೈರುಧ್ಯಭಾವನೆ ವಿವರಿಸಿ.

೧೮.ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

೧೯.ಕೊಕ್ಕರೆ ಎಂದು ಅರ್ಥ ಬರುವ ಒಗಟನ್ನು ವಿವರಿಸಿ.

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪*೩=೧೨

೨೦.'' ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ''

೨೧. '' ಈತನ ಮಾತು ಅಶ್ರುತ ಪೂರ್ವಂ''

೨೨. ''ಹಲವು ಕೊಂಬೆಗೆ ಹಾಯುತಲಿದೆ ''

೨೩. ''ರಘೂದ್ವಹನ ಸೊಲ್ಗೇಳಿ ನಮಿಸಲ್ ''

ಈ ಸಾಹಿತಿ /ಕವಿಗಳ ಸ್ಥಳ ,ಕಾಲ,ಕೃತಿ ,ಪ್ರಶಸ್ತಿ /ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.
೨*೩=೬

೨೪. ವಿ.ಕೃ.ಗೋಕಾಕ

೨೫. ಕುಮಾರವ್ಯಾಸ

೨೬. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. ೧*೪=೪

ಕಲುಷಿತ---------

--------------------

-——-----------------

----------ಮುಟ್ಟೋಣ

ಅಥವಾ

ಮತ---------

-----------

-----------

---------ಬಿತ್ತೋಣ.

೨೭. ಈ ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. ೧*೪=೪

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳುಗಿಸಿ ಖಂಡ -ಖಂಡಗಳ
ಸಾರ್ವಭೌಮರಾ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೪=೮

೨೮. ಶಬರಿಯ ಸಂತೋಷ ಸಡಗರ ಮೇಳದವರ ಹಾಡಿನಲ್ಲಿ ವರ್ಣಿತವಾದ ಬಗೆ ವಿವರಿಸಿ.

ಅಥವಾ

ರಾಮನ ದರ್ಶನಕ್ಕಾಗಿ ಶಬರಿ ಮಾಡಿದ ಸಿದ್ಧತೆ, ಅವಳು ಹಂಬಲಿಸಿದ ರೀತಿ ವರ್ಣಿಸಿ.

೨೯. ಧೃತರಾಷ್ಟ್ರನು ಯುದ್ಧ ನಿಲ್ಲಿಸುವಂತೆ ದುರ್ಯೋಧನನ ಮನವೊಲಿಸಲು ಮಾಡಿದ ಪ್ರಯತ್ನ ವಿವರಿಸಿ

ಅಥವಾ

ಧೃತರಾಷ್ಟ್ರನ ಮಾತುಗಳನ್ನು ಸಮರ್ಥಿಸುತ್ತಾ ಗಾಂಧಾರಿ ದುರ್ಯೋಧನನಿಗೆ ನೀಡಿದ ಉಪದೇಶವನ್ನು ಸಂದರ್ಭಸಹಿತ ವಿವರಿಸಿ.

೩೦. ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೧*೪ =೪(೨+೨)

ಸ್ವಾಮಿ ರಾಮತೀರ್ಥರನ್ನು ಕಾಣಲು ಬಂದ ಒಬ್ಬನು ಹೀಗೆಂದನು 'ಜನರು ನಿಮ್ಮನ್ನು ಮೆಚ್ಚುತ್ತಿಲ್ಲ. ...' ಸ್ವಾಮಿ ರಾಮತೀರ್ಥರು ಉತ್ತರಿಸಿದರು. : ' ಅವರು ಸೇಬು ಹಣ್ಣನ್ನು ಮೆಚ್ಚಿದಾಗ ಅದನ್ನು ತಿನ್ನುತ್ತಾರೆ. ಪ್ಲಂ ಹಣ್ಣನ್ನು ಮೆಚ್ಚಿದಾಗಲೂ ಅದನ್ನು ತಿನ್ನುತ್ತಾರೆ. ಮಾಂಸ ,ಕರುಳು,ಮಿದುಳು ಇವನ್ನು ಮೆಚ್ಚಿದಾಗ ಅವನ್ನೂ ನುಂಗುತ್ತಾರೆ. ಅವರು ನನ್ನನ್ನು ಮೆಚ್ಚದಿದ್ದುದು ನನ್ನ ಭಾಗ್ಯವೇ ಸರಿ. ಮೆಚ್ಚಿದ್ದರೆ ನನ್ನನ್ನೂ ಕಬಳಿಸುತ್ತಿದ್ದರು. !'

ಜನರ ಪೊಳ್ಳು ಹೊಗಳಿಕೆಗೆ ದಾಸರಾದರೆ ನಾವು ನಮ್ಮ ಗುರಿಯಿಂದ ಜಾರುತ್ತೇವೆ. ಆ ಹೊಗಳಿಕೆಯನ್ನು

ಉಳಿಸಿಕೊಳ್ಳುವ ಹಂಬಲ ಹೆಚ್ಚುತ್ತದೆ. ಆಗ ನಮ್ಮ ಬದುಕು ನಮ್ಮ ಅಧೀನವಿರದು. -ನಮ್ಮ ಸಮಯವೂ ನಮ್ಮದಾಗುವುದು.

ಎಮರ್ಸನ್ ಹೇಳಿದಂತೆ 'ಜಗತ್ತು ಏನು ಹೇಳೀತು ? ಜನರು ಏನು ಹೇಳಿ ಯಾರು ? ಎಂದು ಯೋಚಿಸದೆ ತನ್ನ ಕಾರ್ಯದಲ್ಲಿಯೇ ಮಗ್ನನಾಗಿ, ಆ ಕಾರ್ಯದ ಯಶಸ್ಸಿನತ್ತ ಲಕ್ಷ್ಯ ಪೂರೈಸುವವನೇ ಎಲ್ಲರಿಗಿಂತ ಸುಖಿಯಾಗಿರುತ್ತಾನೆ.

ಪ್ರಶ್ನೆಗಳು : ೧. ಜನರು ತಮ್ಮನ್ನು ಮೆಚ್ಚದಿರುವುದರ ಬಗ್ಗೆ ಸ್ವಾಮಿ ರಾಮತೀರ್ಥರು ಏನು ಹೇಳಿದ್ದಾರೆ.?

೨. ಎಲ್ಲರಿಗಿಂತ ಹೆಚ್ಚು ಸುಖಿಯಾ ಗಿರಲು ಹೇಗೆ ಸಾಧ್ಯ ಎಂದು ಎಮರ್ಸನ್ ಹೇಳಿದ್ದಾನೆ ?

## ಭಾಗ - 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೧೦*೧=೧೦

೩೧. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ--------

( ಎ) ೨೫ (ಬಿ)೧೦ (ಸಿ)೯ (ಡಿ)೫

೩೨. 'ಬ್ರಹ್ಮಾಸ್ತ್ರ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ:

(ಎ) ಗುಣಸಂಧಿ (ಬಿ) ಆದೇಶ ಸಂಧಿ (ಸಿ)ಸವರ್ಣದೀರ್ಘಸಂಧಿ (ಡಿ) ವೃದ್ಧಿಸಂಧಿ

೩೩. 'ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು. '

(ಎ) ವಾಕ್ಯವೇಷ್ಠನ (ಬಿ) ಪ್ರಶ್ನಾರ್ಥಕ (ಸಿ)ಉದ್ಧರಣ (ಡಿ)ಪೂರ್ಣವಿರಾಮ

೩೪. 'ಶಿವಂಗೆ ' ಈ ಪದದಲ್ಲಿರುವ ವಿಭಕ್ತಿಯಿದು :

(ಎ) ದ್ವಿತೀಯಾ (ಬಿ)ಚತುರ್ಥಿ (ಸಿ) ಸಪ್ತಮಿ (ಡಿ) ಪ್ರಥಮಾ

೩೫. 'ಬೆಂದಮನ ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

(ಎ) ತತ್ಪುರುಷ (ಬಿ)ಗಮಕ (ಸಿ) ದ್ವಂದ್ವ (ಡಿ) ಕ್ರಿಯಾ

೩೬. 'ಬರೆಯದ ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ)ತದ್ಧಿತಾಂತ ಅವ್ಯಯ ಬಿ)ಕೃದಂತ ಭಾವನಾಮ ಸಿ) ಕೃದಂತಾವ್ಯಯ ಡಿ) ನಿಷೇಧ ಕೃದಂತ

೩೭. ಇವುಗಳಲ್ಲಿ ಮಧ್ಯಮ ಪುರುಷ ಸರ್ವನಾಮ ಪದ

ಎ)ನೀನು ಬಿ)ತಾನು ಸಿ)ಅವರು ಡಿ) ನಾನು

೩೮. 'ಹೋದೀತು 'ಪದವು ಈ ಮಾದರಿಯ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ.

(ಎ)ಸಂಭಾವನಾರ್ಥಕ (ಬಿ)ನಿಷೇಧಾರ್ಥಕ (ಸಿ)ವಿಧ್ಯರ್ಥಕ (ಡಿ)ಸಾಮಾನ್ಯಾರ್ಥಕ

೩೯. ಜಮೀನು ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.

(ಎ) ಅರಬ್ಬೀ (ಬಿ) ಉರ್ದು (ಸಿ)ಪೋರ್ಚುಗೀಸ್ (ಡಿ)ಫಾರ್ಸಿ

೪೦.'ನಿಲ್ಸಿ' ಪದದ ಗ್ರಾಂಥಿಕರೂಪವಿದು :

(ಎ) ನಿಲ್ಲಿ (ಬಿ) ನಿಲ್ಲಿಸಿ (ಸಿ) ನಿಲ್ಸೀ (ಡಿ)ನಿಲ್ಲಿರಿ

ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. ೪*೧=೪

೪೧. ವಾಜಿ : ಕುದುರೆ :: ಅಬ್ಧಿಪ : __________

೪೨. ಅಥವಾ :ಸಂಬಂಧಾರ್ಥಕ ಅವ್ಯಯ :: ಅಯ್ಯೋ! : _______

೪೩.ಸುತ್ತಮುತ್ತ : ಜೋಡುನುಡಿ : : ದಿನದಿನ : ___

೪೪. ವೈಶಾಖ : ಬೇಸಗೆ : : ಕುಠಾರ : ____

೪೫ .ಈ ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೩=೩

ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ |
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು
ಅಥವಾ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

೪೬. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣ ಬರೆದು ಸಮನ್ವಯಿಸಿ. ೧*೩=೩

'ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು '

ಅಥವಾ

'ಕಾದಾಟದಾಟ '

ಭಾಗ -'ಸಿ'

೪೭. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩=೩

- ಮಾಡಿದ್ದುಣ್ಣೊ ಮಹರಾಯ
- ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು
- ಚಿಂತೆ ಇಲ್ಲದವನಿಗೆ ಸಂತೆಯಲ್ಲು ನಿದ್ದೆ

೪೮. ನೀವು ರಾಮನಗರದ ವಿಜಯಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ಅಶ್ವಿನ್/ಅಶ್ವಿನಿ ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗಣರಾಜ್ಯೋತ್ಸವ ದಿನ' ದ ವರದಿ ಪ್ರಕಟಿಸುವಂತೆ ಕೋರಿ ವಿಜಯಕರ್ನಾಟಕ ವಿದ್ಯಾರ್ಥಿ ಮಿತ್ರ ಸಂಚಿಕೆಯ ಸಂಪಾಕರಿಗೆ ಪತ್ರ ಬರೆಯಿರಿ .
೧*೫=೫

ಅಥವಾ

ನಿಮ್ಮನ್ನು ಧಾರವಾಡದ ಶ್ರೀನಿಕೇತನ ವಿದ್ಯಾಸಂಸ್ಥೆಯಲ್ಲಿ ೧೦ ನೇ ತರಗತಿಯಲ್ಲಿ ಓದುತ್ತಿರುವ 'ಪ್ರಗತಿ ' ಎಂದು ಭಾವಿಸಿ ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳದಿನಾಚರಣೆಯ ಕುರಿತು 'ಕಲಘಟಗಿ'ಯ ನಿವಾಸಿಯಾದ ನಿಮ್ಮ ಗೆಳತಿ 'ಶರಣಮ್ಮ'ಳಿಗೆ ಪತ್ರ ಬರೆಯಿರಿ.

೪೯. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. ೧*೫ =೫

- ಇಂದಿನ ಶಿಕ್ಷಣ ಪದ್ಧತಿ
- ಯೋಗದ ಅಗತ್ಯತೆ
- ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

****************************** ಕಾಯಕವೇ ಕೈಲಾಸ ********************************